ಹೊಸಕೆರೆಗಳ ನಿರ್ಮಾಣ

694 (1077) **ಶ್ರೀ ಶಿವಲಿಂಗೇಗೌಡ, ಕೆ.ಎಂ. (ಅರಸೀಕೆರೆ) :** ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ಕ್ಷೇತ್ರದಲ್ಲಿನ ಸಿದ್ದರಬೆಟ್ಟದ ಹತ್ತಿರ ಹೊಸಕೆರೆ ನಿರ್ಮಿಸಲು ಸರ್ಕಾರದಿಂದ ಮಂಜೂರಾತಿ ದೊರೆತಿರುವುದೇ;

ಆ) ಹಾಗಿದ್ದಲ್ಲಿ, ಅರಣ್ಯ ಇಲಾಖೆಯವರು ಈ ಕೆರೆ ನಿರ್ಮಾಣಕ್ಕೆ ಅಡ್ಡಿ ಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು) :

ಅ) ಸಿದ್ದರಬೆಟ್ಟದ ಹತ್ತಿರ ಹೊಸಕೆರೆ (ಇಂಗುಕೆರೆ) ನಿರ್ಮಿಸಲು ರೂ.77.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಯನ್ನು ಎ.ಐ.ಬಿ.ಪಿ ಯೋಜನೆಯಡಿಯಲ್ಲಿ ಕೈಗೊಳ್ಳಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗೆ ನಿರೀಕ್ಷಿಸಲಾಗಿದೆ.

ಆ) ಅರಣ್ಯ ಪ್ರದೇಶದಲ್ಲಿ ಕೆರೆಗೆ ಒಟ್ಟು 2.20 ಹೆಕ್ಟೇರ್ ಅವಶ್ಯಕತೆ ಇದ್ದು, ಸದರಿ ಜಮೀನನ್ನು ಒದಗಿಸಲು ಅರಣ್ಯ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.